ಓ ಎಸ್ ನಂಃ 121/2024

ಪಿ. ಡಬ್ಲ್ಯೂ ಃ 1

ದಿಃ 29.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ ಕೆ ಹೆಚ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಹೆಬ್ಬೆಟ್ಟಿನ ರುಜು ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ದಾವಾ ಸ್ವತ್ತಿನ ಆರ್ ಟಿ ಸಿ ಯನ್ನು ಕೊಟ್ಟಿದ್ದು ಅದನ್ನು ನಿ ಪಿ 1 ಎಂದು, ವಕೀಲರ ಮೂಲಕ ನೀಡಿದ ಲೀಗಲ್ ನೋಟೀಸ್ ನ ಪ್ರತಿಯನ್ನು ನಿ ಪಿ 2 ಎಂದು, ಅಂಚೆ ರಶೀದಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 3 ಎಂದು, ಸ್ವೀಕೃತಿ ಆಗದ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ನ್ಯಾಯಾಲಯದ ಅನುಮತಿ ಪಡೆದು ಲಕೋಟೆಯನ್ನು ಒಡೆದು ತೆಗೆದು ಲಕೋಟೆಯ ಕವರ್ ನ್ನು ನಿ ಪಿ 4 ಎಂದು, ಅದರಲ್ಲಿ ಒಳಗೆ ಇರುವ ನೋಟೀಸ್ ನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು. ಕರಾರುಪತ್ರವನ್ನು ನಿಶಾನೆಗೊಳಿಸಲು ವಾದಿ ಪರ ವಕೀಲರು ಅದು ಕಡಿಮೆ ಛಾಪಾ ಕಾಗದದ ಮೇಲೆ ಬರೆದಿದ್ದು ಅದಕ್ಕೆ ತಗಲುವ ಸ್ಟ್ಯಾಂಪ್ ಡ್ಯೂಟಿ ಕೊಡುವುದಾಗಿ ಹೇಳಿರುವುದರಿಂದ ಆ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.